ಒ. ಎಸ್. ನಂ.417/2022

ಪಿಡಬ್ಲೂ-1

ದಿನಾಂಕಃ 05.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ಸುಮಾರು 28 ವರ್ಷಗಳ ಹಿಂದೆ ಜಯಮ್ಮ ರವರು ಪ್ರತಿವಾದಿ 1 ರವರಿಗೆ ದಾವಾ ಸ್ವತ್ತಿನ ಪೈಕಿ 36 1/2 ಗುಂಟೆ ಜಮೀನನ್ನು ಸ್ವಾಧೀನ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆಂದು 2 ನೇ ವಾದಿಯನ್ನು ದಾವೆಯಲ್ಲಿ ಸೇರಿಸಿರುತ್ತೇವೆ. ವಾದಿ 2 ರವರ ಹೆಸರಿನಲ್ಲಿ ಪಹಣಿ ನಮೂದು ಇಲ್ಲ ಎಂದರೆ ಸರಿ. ವಾದಿ 2 ರವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ವಾದಿ 1 ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ವಾದಿಯನ್ನು ಈ ದಾವೆಯಲ್ಲಿ ಏಕೆ ಸೇರಿಸಿರುತ್ತೇವೆ ಎಂದು ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಜಮೀನಿಗೆ ತೊಂದರೆ ಕೊಡುತ್ತಿದ್ದಾರೆ ಅದಕ್ಕೆ ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. 1 ನೇ ವಾದಿ ಪ್ರತಿವಾದಿ 1 ರಿಂದ 3 ರವರ ವಿರುದ್ಧ ನೀಡಿದ ದೂರು ಈಗಲೂ ಬಾಕಿ ಇದೆ ಎಂದರೆ ಸರಿ. ಪ್ರತಿವಾದಿಗಳು ನೀಡಿದ ಕ್ರಿ. ಪ್ರಕರಣದಲ್ಲಿ ವಾದಿ ಹಾಜರುತ್ತಿಲ್ಲ. ಸುಮಾರು 12-13 ವರ್ಷಗಳ ಹಿಂದೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ನಡೆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗೆ ಪಾಲು ಪಟ್ಟಿ ಮುಖಾಂತರ 36 ½ ಗುಂಟೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಅಜ್ಜಿ ಜಯಮ್ಮ ರವರಿಗೆ 36 ½ ಗುಂಟೆ ಬಂದಿದೆ ಎಂದರೆ ಸರಿ.

ಜಯಮ್ಮ ಬದುಕಿರುವವರೆಗೂ ಸದರಿ ಆಸ್ತಿಯನ್ನು ಅನುಭವಿಸಿ ಅವರು ಮೃತಪಟ್ಟ ನಂತರ ಅವರ ಮಗಳು ರೇಖಾ ಮಣಿಗೆ ಸೇರಿ ಅವರು ಮೃತ ಪಟ್ಟ ನಂತರ ಅವರ 3 ಜನ ಗಂಡುಮಕ್ಕಳಿಗೆ ಸೇರತಕ್ಕದ್ದು ಎಂದು ಪಾಲು ಪಟ್ಟಿಯಲ್ಲಿ ಬರೆಸಿದ್ದಾರೆ ಎಂದರೆ ಸರಿ. ಆ ರೀತಿ ಪಾಲುಪಟ್ಟಿಯಲ್ಲಿ ನಮೂದು ಇರುವುದರಿಂದ ವಾದಿ ಒಬ್ಬರೇ ಖಾತೆ ಮಾಡಿಸಿಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿ ಸ್ವತ್ತಿನ ವ್ಯವಸಾಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**